## ಸೂಕ್ತಿಪ್ರಭ

ವಿವೇಕಿಗಳು ಮಾತನಾಡುವುದಕ್ಕಿರುವುದರಿಂದ ಮಾತನಾಡುತ್ತಾರೆ, ಮೂರ್ಖರು ಏನಾದರೂ ಮಾತನಾಡಬೇಕಲ್ಲ ಎಂದು ಮಾತನಾಡುತ್ತಾರೆ.

— ಪ್ಲೇಟೊ

ಸೋಲದೆ ಇರುವುದೇ ಪರಮಶ್ರೇಷ್ಠತೆಯಲ್ಲ. ಸೋತಾಗಲೆಲ್ಲ ಎಚ್ಚೆತ್ತು ಮುನ್ನಡೆಯುವುದರಲ್ಲಿ ಪರಮ ಶ್ರೇಷ್ಠತೆ ಅಡಗಿದೆ.

—ಕನ್‌ಫ್ಯೂಷಿಯಸ್

ನಿಮ್ಮ ತಪ್ಪುಗಳಿಂದ ನೀವು ಪಾಠ ಕಲಿಯುವುದು ಯಾವಾಗಲೂ ಒಳ್ಳೆಯದು. ಆಗ ಆ ತಪ್ಪುಗಳೂ ಅರ್ಥಪೂರ್ಣವಾಗುತ್ತವೆ.

—ಗ್ಯಾರಿ ಮಾರ್ಶಲ್

ಈ ಪ್ರಪಂಚ ಒಂದು ಸೇತುವೆ, ಅದರ ಮೂಲಕ ಹಾದುಹೋಗಿ, ಅದರ ಮೇಲೆ ಮನೆ ಮಾಡಬೇಡಿ.

—ಯೇಸು ಕ್ರಿಸ್ತ

ಶತ್ರುಗಳನ್ನು ಸೋಲಿಸುವುದು ಸುಲಭ. ಆದರೆ ಹಿರಿಯರು ಬೈಯದಿರುವಂತೆ ನಡೆದುಕೊಳ್ಳುವುದು ಕಷ್ಟ.

—ಸುಭಾಷಿತ

ತನಗೆ ಪ್ರತಿಕೂಲವಾದುದನ್ನು ಇತರರಿಗೂ ಮಾಡಬಾರದು.

—ಸುಭಾಷಿತ

ನಾವು ಕೊಡಗಟ್ಟಳೆ ಉಪದೇಶವನ್ನು ನೀಡುತ್ತೇವೆ, ಆದರೆ ಕಾಳಿನಷ್ಟು ಸ್ವೀಕರಿಸುತ್ತೇವೆ.

—ಡಬ್ಲ್ಯು. ಆರ್. ಆಲ್ಗರ್

ವಿವೇಕಕ್ಕಿಂತ ದಯೆಯೇ ಮುಖ್ಯವಾದುದು. ಇದನ್ನು ಗುರುತಿಸುವುದೇ ವಿವೇಕದ ಉದಯ.

—ಥಿಯೋಡೋರ್ ಐಸಾಕ್ ರುಬಿನ್

## ಪ್ರಾರ್ಥನೆ

**ತಾಮಗ್ನಿವರ್ಣಾಂ ತಪಸಾ ಜ್ವಲಂತೀಂ**
**ವೈರೋಚನೀಂ ಕರ್ಮಫಲೇಷು ಜುಷ್ಟಾಂ |**
**ದುರ್ಗಾಂ ದೇವೀಂ ಶರಣಮಹಂ ಪ್ರಪದ್ಯೇ**
**ಸುತರಸಿ ತರಸೇ ನಮಃ ||**

ಋಗ್ವೇದ ಖಿಲ ೧೦.೧೨೭.೧೨.

ಸುಪ್ರೀತಳಾದಾಗ ಭಕ್ತರಿಗೆ ಅವರ ಕರ್ಮಫಲವನ್ನು ನೀಡುವ ಹಾಗೂ ತಪಸ್ಸಿನಿಂದ ಪ್ರಜ್ವಲಿಸುತ್ತಿರುವ ಅಗ್ನಿವರ್ಣದ ದೇವಿ ದುರ್ಗೆ! ನಮ್ಮನ್ನು ಎಲ್ಲ ವಿಪತ್ತುಗಳಿಂದ ಪಾರು ಮಾಡು. ನಿನಗೆ ನಮ್ಮ ನಮನಗಳು.

**ದುರ್ಗೇ ಸ್ಮೃತಾ ಹರಸಿ ಭೀತಿಮಶೇಷ ಜಂತೋಃ**
**ಸ್ವಸ್ಥೈಃ ಸ್ಮೃತಾ ಮತಿಮತೀವ ಶುಭಾಂ ದದಾಸಿ|**
**ದಾರಿದ್ರ್ಯದುಃಖಭಯಹಾರಿಣೀ ಕಾ ತ್ವದನ್ಯಾ**
**ಸರ್ವೋಪಕಾರಕರಣಾಯ ಸದಾರ್ದ್ರಚಿತ್ತಾ ||**

ದೇವೀ ಮಹಾತ್ಮ್ಯ ೪.೧೭

ಹೇ ದುರ್ಗೇ, ನಿನ್ನನ್ನು ಸ್ಮರಿಸಿದರೆ ಎಲ್ಲ ಜೀವಿಗಳ ಭಯವನ್ನೂ ಹೋಗಲಾಡಿಸುತ್ತೀಯೆ, ಸುಖವಾಗಿರುವವರಿಂದ ಸ್ಮರಿಸಲ್ಪಟ್ಟಾಗ (ಅವರಿಗೆ) ಅತ್ಯಂತ ಶುಭ ಬುದ್ಧಿಯನ್ನು ಕೊಡುತ್ತೀಯೆ. ದಾರಿದ್ರ್ಯ-ದುಃಖ-ಭಯಗಳನ್ನು ಹೋಗಲಾಡಿಸುವ ದೇವಿಯೇ ! ಸರ್ವಪ್ರಾಣಿಗಳ ಉಪಕಾರಕ್ಕೋಸ್ಕರ ದಯಾರ್ದ್ರ ಚಿತ್ತವುಳ್ಳ ನೀನಲ್ಲದೆ ಮತ್ತಾರು ನಮಗೆ ಆಶ್ರಯ ?

**ದುರ್ಗೇಷು ನಿತ್ಯಂ ಭವಸಂಕಟೇಷು**
**ದುರಂತಚಿಂತಾಽಹಿನಿಗೀರ್ಯಮಾಣಾನ್ |**
**ಶರಣ್ಯಹೀನಾನ್ ಶರಣಾಗತಾರ್ತಿ**
**ನಿವಾರಿಣೀ ತ್ವಂ ಪರಿಪಾಹಿ ದುರ್ಗೇ ||**

ತ್ರಿಪುರಾರಹಸ್ಯ ೪೬.೮೩

ಹೇ ದುರ್ಗೇ, ಯಾವ ಗತಿಯೂ ಇಲ್ಲದೆ ನಿನ್ನಲ್ಲಿ ಶರಣಾಗತರಾದವರ ದುಃಖವನ್ನು ನಿವಾರಿಸುವ ನೀನು ಸಂಸಾರಸಂಕಟಗಳಲ್ಲಿ ದುರಂತಚಿಂತೆಯೆಂಬ ಹೆಬ್ಬಾವಿನಿಂದ ನುಂಗಲ್ಪಡುತ್ತಿರುವ ನಮ್ಮನ್ನು ಕಾಪಾಡು.